

# ಬನಾಟೆ ಎಂಬ ಬಾನಾಡಿ

■ ವಿನು ಗಂಗೆ

ಟೀವಿಯಲ್ಲಿ ಪ್ರಸಾರವಾಗುವ ಜಾಹೀರಾತೊಂದನ್ನು ನೀವು ನೋಡಿರಬಹುದು. ದೀಪಿಕಾ ಪಡುಕೋಣೆ ಸಾಹಸ ದೃಶ್ಯವೊಂದರಲ್ಲಿ ಭಾಗವಹಿಸಿದ ನಂತರ ನಿರ್ದೇಶಕನ ಮೆಚ್ಚುಗೆ ನೋಡಿ, ಪ್ರಶಂಸೆಯ ನುಡಿ ತನ್ನನ್ನೇ ಉದ್ದೇಶಿಸಿದ್ದು ಎಂದು ಭಾವಿಸಿ, ಧನ್ಯವಾದ ತಿಳಿಸಲು ಮುಂದಾಗುತ್ತಾಳೆ. ಆಗ ಅವಳಿಗೆ ನಿರ್ದೇಶಕ ಅಭಿನಂದಿಸಿದ್ದು ತನ್ನನಲ್ಲ, ತನ್ನ ಹಿಂದಿದ್ದ ಗೋಡೆಯನ್ನು ಎಂದು ತಿಳಿದು ಬೇಸ್ತು ಬೀಳುತ್ತಾಳೆ. ಮೂರ್ನಾಲ್ಕು ವರ್ಷಗಳ ಹಿಂದೆ ಹೆಚ್ಚು ಕಡಿಮೆ ಇದೇ ರೀತಿಯ ಘಟನೆಯೊಂದು ನಡೆಯಿತು. ಅರಣ್ಯಾಧಿಕಾರಿಯೊಬ್ಬರು ಸಾಮಾಜಿಕ ಜಾಲತಾಣದಲ್ಲಿ ಬೃಹದಾಕಾರದ ಮರವೊಂದು ಹಿನ್ನೆಲೆಯಲ್ಲಿದ್ದ ತಮ್ಮ ಚಿತ್ರವನ್ನು ಹಾಕಿಕೊಂಡಿದ್ದರು. ಚಿತ್ರವನ್ನು ನೋಡಿದ ಕೂಡಲೇ ಆಕರ್ಷಿತಳಾಗಿ ಅವರ ನಂಬರ್ ಪತ್ತೆ ಹಚ್ಚಿ ಅವರಿಗೆ ಫೋನಾಯಿಸಿದೆ. ನನ್ನ ಪರಿಚಯ ಹೇಳಿಕೊಂಡು 'ಸರ್ ನೀವು ಜಾಲತಾಣದಲ್ಲಿ ಹಂಚಿಕೊಂಡ ನಿಮ್ಮ ಫೋಟೊ ತುಂಬಾ ಚೆನ್ನಾಗಿದೆ. ನಿಮ್ಮ ಹಿಂದೆ ಇರುವ ಮರ ಯಾವುದು?' ಎಂದು ಕೇಳಿದೆ. ದೀಪಿಕಾಳಂತೆ ಪ್ರಶಂಸೆ ನುಡಿಗಳು ತನ್ನನ್ನು ಕುರಿತದ್ದೇ ಎಂದೇನೂ ಬೇಸ್ತುಬೀಳದ ಮಂಜು ಬಡಿಗೇರ್ 'ಅದು ಬನಾಟೆ ಮೇಡಂ. ತುಂಬಾ ದೊಡ್ಡ ಮರ' ಎಂದರು. ವಿವರಿಸುವ ಅಗತ್ಯವಿಲ್ಲದೆ ಬನಾಟೆಯ ಬೃಹದಾಕಾರ ನನಗೆ ಮೋಡಿ ಮಾಡಿತ್ತು.

ಹೀಗೆ ತನ್ನ ದೈತ್ಯ ನಿಲುವಿಗೆ ಗಮನಸೆಳೆಯುವ ಮರ ಬನಾಟೆಯ ವೈಜ್ಞಾನಿಕ ಹೆಸರು **Lophopetalum Wightianum.** ಈವರೆಗೆ ನಾವು ಮರಗಳ ಕತೆಯಲ್ಲಿ ನೋಡಿದ ಎಲ್ಲಾ ಮರಗಳನ್ನು ಮೀರಿ ಮುಗಿಲು ಮುಟ್ಟುವ ಎತ್ತರ, ಅಂದರೆ ಸರಿ ಸುಮಾರು ನೂರಾ ತೊಂಬತ್ತು ಅಡಿಗಳಿಗೂ ಹೆಚ್ಚು ಎತ್ತರ ಬೆಳೆಯಬಲ್ಲ, ವಿಸ್ತಾರ ಸುತ್ತಳತೆಯ ನಿತ್ಯಹರಿದ್ವರ್ಣದ ಮರ. ನಿತ್ಯಹರಿದ್ವರ್ಣದ ದಟ್ಟ ಕಾಡುಗಳಲ್ಲಿ ಮಾತ್ರ ಕಾಣಬಹುದು.

ಇಡೀ ಭೂಮಂಡಲವೇ ನಮ್ಮದು ಎಂಬ ಅಬ್ಬರದ ವರ್ತನೆ ನಮ್ಮದಾದರೂ, ಮನುಷ್ಯನ ಸರಾಸರಿ ಆಯಸ್ಸು ಎಪ್ಪತ್ತೈದು ಇರಬಹುದು. ಆದರೆ ಮರಗಳು ಹಲವು ಶತಮಾನಗಳ ಆಯಸ್ಸನ್ನು ಕಳೆದಿರುವ ದಾಖಲೆಗಳಿವೆ. ವಿಶಾಲವಾದ ಹಂದರದ ಆಲ, ಪಿಳಲಿ ಮರಗಳು ಅಡ್ಡ ಹರೆಗಳಿಂದ ಬಿಳಲುಗಳನ್ನು ಕಳುಹಿಸಿ ಶತಮಾನಗಳ ಕಾಲ ಭೂಮಿಯಲ್ಲಿ ಸ್ಥಾನ ಭದ್ರ ಮಾಡಿಕೊಂಡಿರುತ್ತವೆ. ಅದೇ ರೀತಿ ನೂರರಿಂದ ಇನ್ನೂರು ಅಡಿ ಎತ್ತರ ಬೆಳೆಯುವ ಮರ, ಗಾಳಿ ಮಳೆಯನ್ನು ಸಮರ್ಥವಾಗಿ ನಿಭಾಯಿಸಲು ತಯಾರಿ ಮಾಡಿಕೊಳ್ಳದಿದ್ದರೆ ಶತಮಾನಗಳನ್ನು ದಾಟಲು ಸಾಧ್ಯವೇ? ಒಂದು ಎತ್ತರದ ಕಂಬ ನಿಲ್ಲಿಸುವಾಗ ಕೆಳಗೆ ಲಂಬಾಕಾರದ ಆಧಾರ (vertical support) ನೀಡುವ ರೀತಿಯಲ್ಲಿ, ಬನಾಟೆ ಮರ ಕಾಂಡದಿಂದ ಭೂಮಿಯ ಸಮತಲಕ್ಕೆ ಲಂಬವಾಗಿ ಬಹುದೂರದವರೆಗೆ ಬೇರುಗಳನ್ನು ವ್ಯಾಪಿಸಿ ತನ್ನ ಸ್ಥಾನ ಭದ್ರ ಮಾಡಿಕೊಂಡಿರುತ್ತದೆ. ಈ ಬೇರುಗಳನ್ನು ಹಲಗೆ ಬೇರುಗಳು ಎಂದು ಕರೆಯುತ್ತಾರೆ. ಸ್ಥಂಭಕ್ಕೆ ಆಧಾರ ನೀಡಲು ಜೋಡಿಸಿದ ಹಲಗೆಗಳಂತೆ ಕಾಣುವುದರಿಂದ ಈ ಹೆಸರು. ಹಿಂದೆ ಹೇಳಿದ ನೀರೊಟ್ಟೆ, ಬೂರಲು ಮರದಲ್ಲೂ ಹಲಗೆ ಬೇರುಗಳನ್ನು ನೋಡಬಹುದು.



ಮರದ ವೈಶಿಷ್ಟ್ಯತೆ ಇಲ್ಲಿಗೆ ಮುಗಿಯುವುದಿಲ್ಲ. ಹೆಣ್ಣು ಮಕ್ಕಳಿಗೆ ಅಚ್ಚುಮೆಚ್ಚಾದ ಕೆಂಪು ಹರಳನ್ನು ಚಿನ್ನದ ಕಟ್ಟನಲ್ಲಿ ಜೋಡಿಸಿ ಕೂರಿಸಿದಂಥ ಬೆಂಡೋಲೆಯನ್ನು ಹೋಲುವ ಹೂಗಳು ಇದರದ್ದು. ತೆಳ್ಳಗೆ ಉದ್ದುದ್ದ ಹಾಳೆಯಂತೆ ಹಾರುವ ಬೀಜಗಳದ್ದು ಆಕರ್ಷಕ ತಿಳಿ ಕೇಸರಿ ಬಣ್ಣ. ಉದ್ದನೆಯ ಅಂಡಾಕಾರದ, ಅಭಿಮುಖವಾಗಿ ಜೋಡಣೆಗೊಂಡ ಎಲೆಗಳು. ಕಾಂಡದ ಹೊರಮೈ ನುಣುಪಾಗಿರುತ್ತದೆ. ಈ ಎಲ್ಲಾ ಗುಣಲಕ್ಷಣಗಳಿಂದ ಬನಾಟೆ ಮರವನ್ನು ಗುರುತಿಸಬಹುದು. ಬನಾಟೆ ನಾಟಾ ಹಗುರ. ಬೊಳ್ಪಾಲೆ ಎಂಬ ಹೆಸರೂ ಇದಕ್ಕಿದೆ.

ಜೇನುಗಳು ಗೂಡು ಕಟ್ಟಲು ಈ ಮರವನ್ನು ಅವಲಂಬಿಸುವುದು ಸಾಮಾನ್ಯ. ಮುಗಿಲ ಮುಟ್ಟುವ ಬನಾಟೆಯ ಕೊಂಬೆಗಳು ಮಾನವನ ಹಸ್ತಕ್ಷೇಪದ ಭಯಕ್ಕೆಡೆ ಕೊಡದಂತೆ ಜೇನುಗೂಡಿಗೆ ಆಶ್ರಯ ನೀಡುತ್ತವೆ. ಸುಮಾರು ಏಳೆಂಟು ವರ್ಷಗಳ ಹಿಂದೆ ಕಾಡು ಮರಗಳ ಬಗ್ಗೆ ಏನು ಎತ್ತ ಎಂದು ಗೊತ್ತಿಲ್ಲದ ಸಮಯದಲ್ಲಿ ಹೆಸರಿಗೆ ಎರಡರಂತೆ ತೋಟದಲ್ಲಿ ಹಚ್ಚಿದ ಗಿಡದಲ್ಲಿ ಬನಾಟೆಯೂ ಇತ್ತು. ಆದರೆ ಬನಾಟೆಯ ದಿವ್ಯ ಸ್ವರೂಪ ತಿಳಿದದ್ದು ಅರಣ್ಯಾಧಿಕಾರಿಯವರ ಫೋಟೊ ನೋಡಿದಾಗಲೇ. ಈಗ ನಮ್ಮ ಬನಾಟೆ ಮರವಾಗಿ ಬೆಳೆದು ಬೆಂಡೋಲೆ ಕೊಡಲು ಸಿದ್ಧವಾಗಿದೆ.

ಹಲಗೆ ಬೇರುಗಳ ಕಾರಣ ಬನಾಟೆಯನ್ನು ರಸ್ತೆ ಬದಿಯಲ್ಲಿ ಬೆಳೆಯಲಾಗದು. ಬೀಜಗಳ ಜೀವಶಕ್ತಿ ಕೇವಲ ಒಂದು ವಾರ ಮಾತ್ರ. ಸರಿ ಸುಮಾರು ಮುಂಗಾರು ಶುರುವಾಗುವ ಹೊತ್ತಿಗೆ ಬಲಿತ ಕಾಯಿಗಳು ಒಡೆದು ಬೀಜಗಳು ಗಾಳಿಯಲ್ಲಿ ತೇಲಿ ಹೋಗುತ್ತವೆ. ಉದ್ಯಾನವನ ಹಾಗೂ ಸಂರಕ್ಷಿತ ಪ್ರದೇಶದಲ್ಲಿ ಬೆಳೆಯಬಹುದು. ಹಲವು ವೈಶಿಷ್ಟ್ಯಗಳ ಬನಾಟೆ ತನ್ನ ಬೆಂಡೋಲೆಗಳನ್ನು, ಎಂಜಿನಿಯರಿಂಗ್ ಕೌಶಲ್ಯದಿಂದ ವ್ಯಾಪಿಸಿದ ತನ್ನ ಬೇರುಗಳನ್ನು, ಮುಗಿಲೆತ್ತರಕ್ಕೆ ಏರಿ ಚಿಕ್ಕ ಚಿಕ್ಕ ಜೇನುಗಳಿಗೆ ಆಸರೆಯಾಗುವ ವೈಶಾಲ್ಯತೆಯನ್ನು ಅಲ್ಲದೇ, ಅಬ್ಬರವಿಲ್ಲದ ಪ್ರಶಾಂತ ಸ್ಥಿತಿಯಲ್ಲಿ ಶತಮಾನಗಳನ್ನು ದಾಟುವ ಎತ್ತರದ ನಿಲುವನ್ನು ತೋರುತ್ತಾ ಮತ್ತಷ್ಟು ನಿಲ್ಲುವಂತಾಗಲಿ. ■